ಈ) ಕಾಮಗಾರಿ ಪೂರ್ಣಗೊಳಿಸಲು ನಿಗದಿಪಡಿಸಿದ ಸಹಾಯವೆಷ್ಟು, (ಈ ಕಾಮಗಾರಿಯ ಅಂದಾಜು ಮೊತ್ತ ವೆಚ್ಚದ ವಿವರ ನೀಡುವುದು)?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಹೌದು ಗಮನಿಸಿದೆ

ಆ) ಸಂಬಂಧಿಸಿದ ಗುತ್ತಿಗೆದಾರರ ಮಂದ ಪ್ರವೃತ್ತಿ ಹಾಗೂ ಬೇಜವಾಬ್ದಾರಿಯೇ ಕಾಮಗಾರಿಯ ವಿಳಂಬಕ್ಕೆ ಮುಖ್ಯ ಕಾರಣ

ಇ) ಈ ಮುಂಚಿನ ಗುತ್ತಿಗೆದಾರರ ಗುತ್ತಿಗೆಯನ್ನು ಡಿಸೆಂಬರ್ 2003ರಲ್ಲಿ ರದ್ದುಪಡಿಸಲಾಗಿದ್ದು, ಹೊಸ ಗುತ್ತಿಗೆದಾರರನ್ನು ಗೊತ್ತುಪಡಿಸಲು ಮರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಆದಷ್ಟು ಶೀಘ್ರಗತಿಯಲ್ಲಿ ಹೊಸ ಗುತ್ತಿಗೆದಾರರಿಗೆ ಕೆಲಸವನ್ನು ವಹಿಸಿಕೊಡಲಾಗುವುದು

ಈ) ಈ ಕಾಮಗಾರಿಯ ಒಟ್ಟು ಅಂದಾಜು ಮೊತ್ತ 157 0 ಲಕ್ಷ ರೂ ಇದುವರೆವಿಗೆ ಮಾಡಲಾಗಿರುವ ಒಟ್ಟು ವೆಚ್ಚ 84 84 ಲಕ್ಷ ರೂ ಗಳು ಆದುದರಿಂದ ಕಾಮಗಾರಿಯನ್ನು ಪೂರ್ಣಗೊಳಿಸಲು ಬೇಕಾಗುವ ಹಣ /2 16 ಲಕ್ಷ ರೂ

ಗ್ರಾಮಾಂತರ ಪ್ರದೇಶದಲ್ಲಿ ವಿದ್ಯುತ್ತ್ ಬಳಕೆಯ ಬಗ್ಗೆ

637 (596) ಶ್ರೀ ಕೃಷ್ಣಮೂರ್ತಿ ಕೆ ಎಂ (ಕಡೂರು) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗ್ರಾಮಾಂತರ ಪ್ರದೇಶಗಳಲ್ಲಿರುವ ಬೀದಿ ದೀಪಗಳಿಗೆ ವಿದ್ಯುತ್ ಕಂಪನಿಗಳು ಎಷ್ಟು ಬಗ ನಿಗಧಿ ಪಡಿಸಿರುತ್ತಾರೆ ಕನಿಷ್ಟ ಮತ್ತು ಗರಿಷ್ಟ ದರ (ವಿವರ ಒದಗಿಸುವುದು)

ಆ) ಗ್ರಾಮಾಂತರ ಪ್ರದೇಶಗಳಲ್ಲಿ ರಾತ್ರಿ ವೇಳೆಯಲ್ಲಿ ವಿದ್ಯುತ್ ಸರಬರಾಜು ಇಲ್ಲದಿದ್ದರೂ, ರಸ್ತೆಯಲ್ಲಿ ವಿದ್ಯುತ್ ದೀಪವಿಲ್ಲದಿದ್ದರೂ ಹಾಗೂ ಸಮರ್ಪಕವಾಗಿ ವಿದ್ಯುತ್ ಸರಬರಾಜು ಇಲ್ಲಗಿದ್ದರೂ ಗ್ರಾಮ ಪಂಚಾಯಿತಿಯವರು, ಕೆ ಪಿ ಟಿ ಸಿ ಎಲ್‌ಗೆ ಲೈನ್ ಕಮಿಷನ್ ದರವನ್ನು ಪಾವತಿಸಲೇ ಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಸದರಿ ಹಣವನ್ನು ಗ್ರಾಮ ಪಂಚಾಯಿತಿ/ಜಿಲ್ಲಾ ಪಂಚಾಯಿತಿ ಅಥವಾ ಸರ್ಕಾರ ಭರಿಸುತ್ತದೆಯೇ

ಈ) ವಿದ್ಯುತ್ ಸರಬರಾಜು ಹಣವನ್ನು ಗ್ರಾಮ ಪಂಚಾಯಿತಿಯವರು ತುಂಬುವುದರಿಂದ ಗ್ರಾಮ ಪಂಚಾಯಿತಿಯ ಸರ್ವತೋಮುಖ ಅಭಿವೃದ್ಧಿಯ ಕಾಮಗಾರಿಗಳನ್ನು ಮಾಡದೇ ಕುಂಠಿತಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಸರ್ಕಾರವು ಈ ಬಗ್ಗೆ ಪರ್ಯಾಯ ಕ್ರಮ ಹಮ್ಮಿಕೊಳ್ಳುವ ಸದುದ್ದೇಶ ಇದೆಯೇ?

ಶ್ರೀ ಬಸವರಾಜ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಗ್ರಾಮಾಂತರ ಪ್ರದೇಶಗಳಲ್ಲಿರುವ ಬೀದಿ ದೀಪಗಳಿಗೆ ದಿನಾಂಕ 1 4 2003 ರಿಂದ ಅನ್ವಯವಾಗುವಂತೆ ಈ ಕೆಳಕಂಡ ದರಗಳನ್ನು ವಿಧಿಸಲಾಗುತ್ತಿದೆ

1 ಮೀಟರ್ ಅಳವಡಿಸಿರುವ ಸ್ಥಾಪನಗಳಿಗೆ

ನಿಗಧಿತ ದರ ಮಂಜೂರಾದ ಪ್ರತಿ ಕಿ ವ್ಯಾ.ಗೆ ರೂ 50 00 ಮತ್ತು ಆ ತಿಂಗಳಲ್ಲಿ ಬಳಸಿದ ಎಲ್ಲಾ ಯೂನಿಟ್ಟುಗಳಿಗೆ, ಪ್ರತಿ ಯೂನಿಟ್ಟಿಗೆ ರೂ 3 10

2 ಮೀಟರ್ ಅಳವಡಿಸಿದೇ ಇರುವ ಸ್ಥಾಪನೆಗಳಿಗೆ

ನಿಗದಿತ ದರ ಮೀಟರ್ ಅಳವಡಿಸುವವರೆಗೆ ಪ್ರತಿ ತಿಂಗಳಿಗೆ ಕಿ ವ್ಯಾ ಗೆ ರೂ 1200 00

ಆ) ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಬೀದಿ ದೀಪಗಳ ವಿದ್ಯುತ್ ಬಳಕೆಗೆ ಪಾವತಿಸಬೇಕಾದ ದರವನ್ನು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಈಗ ನಿಗದಿಪಡಿಸುತ್ತಿದೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ವಿದ್ಯುತ್ ಸರಬರಾಜು ಕಂಪನಿಗಳು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ನಿಗದಿಪಡಿಸುವ ದರಗಳ ಪ್ರಕಾರವೇ ವಿದ್ಯುತ್ ಬಿಲ್ಲುಗಳನ್ನು ಸ್ಥಳೀಯ ಸಂಸ್ಥೆಗಳಿಗೆ ನೀಡುತ್ತಿದೆ ಗ್ರಾಮಾಂತರ ಪ್ರದೇಶಗಳಲ್ಲಿ ಬಹುತೇಕ ಬೀದಿ ದೀಪಗಳಿಗೆ ಮೀಟರ್‌ಗಳನ್ನು ಇನ್ನೂ ಅಳವಡಿಸಬೇಕಾಗಿರುವುದರಿಂದ ಮೀಟರ್ ಅಳವಡಿಸುವವರೆಗೆ ಕನಿಷ್ಠ ದರವನ್ನು ಪಾವತಿಸಬೇಕಾಗಿರುತ್ತದೆ

ಇ) ಬೀದಿ ದೀಪಗಳ ವಿದ್ಯುತ್ ಹಣವನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳೇ ಭರಿಸಬೇಕಾಗಿರುತ್ತದೆ

ಈ) ವಿದ್ಯುತ್ ಸರಬರಾಜು ಗ್ರಾಮ ಪಂಚಾಯಿತಿಯ ಸರ್ವತೋಮುಖ ಅಭಿವೃದ್ಧಿಗೆ ಮೂಲಭೂತವಾಗಿ ಬೇಕಾಗಿರುತ್ತದೆ ಆದುದರಿಂದ ವಿದ್ಯುತ್ ಸರಬರಾಜಿಗೆ ಹಣವನ್ನು ತುಂಬುವುದರಿಂದ, ಗ್ರಾಮ ಪಂಚಾಯಿತಿಯ ಸರ್ವತೋಮುಖ ಅಭಿವೃದ್ಧಿಯ ಕುರಿತಗೊಳ್ಳುವುದಿಲ್ಲ ಈ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯಿತಿಗಳಿಗೆ ನೀಡಲಾಗುವ ಅನುದಾನದಲ್ಲಿ ವಿದ್ಯುತ್ ಸರಬರಾಜಿನ ಬಿಲ್ಲಿನ ಹಣವನ್ನು ಹೊಂದಾಣಿಕೆ ಮಾಡಲಾಗುತ್ತಿದೆ

ಕೆ ಎಸ್ ಆರ್ ಟಿ.ಸಿ ಯನ್ನು ಖಾಸಗೀಕರಣ ಮಾಡುವ ಬಗ್ಗೆ

640 (643) ಶ್ರೀ ಮನೋಹರ್ ಕಾಡೋಲ್ಕರ್ (ಉಚ್ಚಗಾಂವ್) ಮಾನ್ಯ ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ಖಾಸಗೀಕರಣ ಮಾಡುವ ಉದ್ದೇಶವಿದೆಯೇ

ಆ) ಹಾಗಿದ್ದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ಖಾಸಗೀಕರಣಗೊಳಿಸುವುದರಿಂದ ಆಗುವ ಸಾಧಕ-ಬಾಧಕಗಳೇನು

ಇ) ಖಾಸಗಿ ಸಂಸ್ಥೆಗಳು ಯಾವಾಗಲೂ ಹೆಚ್ಚಿನ ಲಾಭ ಮಾಡುವುದು ಮತ್ತು ಕಡಿಮೆ ಸೇವಾಧ್ಯಯ ಹೊಂದಿರುವುದರಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ಖಾಸಗೀಕರಣಗೊಳಿಸುವುದರಿಂದ ಬಡ ಜನತೆಗೆ ತೊಂದರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಿ ರಮಾನಾಥ್ ರೈ (ಸಾರಿಗೆ ಸಚಿವರು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ